ನಮ್ಮ ಪ್ರಯತ್ನವಿರುತ್ತದೆ. ಅದು ಸಮಾನತೆಗೆ ಅತೀ ಹತ್ತಿರ ಇರಬಹುದು. ಆದರೆ ಅದು ಪರಿಪೂರ್ಣ ಸ್ಥಿತಿಯಲ್ಲಿರುವುದಿಲ್ಲ. ನಾನಿದನ್ನು ಮಾಸ್ಟರ್‌ಸ್ಲೇವ್ ಥರದ ಅರ್ಥದಲ್ಲಲ್ಲ. ಬಹಳ ವಿಶಾಲವಾದ ಅರ್ಥದಲ್ಲಿ ಹೇಳುತ್ತಿದ್ದೇನೆ. ಸಂಬಂಧಗಳಲ್ಲಿ ಕೂಡ ಆಕರ್ಷಣೆ ಕುಂದದಿರಬೇಕಾದರೆ ನಮಗೆ ಹೊರತಾದದ್ದು ಅಲ್ಲಿದೆ ಅನಿಸಬೇಕು. ಭಿನ್ನತೆ ಮತ್ತು ಸಮಾನತೆಗಳು ಬೇರೆಬೇರೆ ಎಂಬುದನ್ನು ಮರೆಯದೇ ಹೀಗೆ ಹೇಳುತ್ತಿದ್ದೇನೆ.

● ವ್ಯಕ್ತಿ, ವ್ಯವಸ್ಥೆ ಮತ್ತು ಬದಲಾವಣೆ ಇಲ್ಲಿ ಸಾಹಿತ್ಯದ ಪಾತ್ರವೇನು?

ಇದು ರಾಜಕೀಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಸಾಹಿತ್ಯದಲ್ಲಿ ರಾಜಕೀಯ ಅನ್ನುವುದು ಬಹಳ ಅಪಾರ್ಥಕ್ಕೆ ಗುರಿಯಾಗಿದೆ. ಪ್ರೊಟೆಸ್ಟ್ ಲಿಟರೇಚರ್ ಮೂಲಕ ಮಾತ್ರ ಸಾಹಿತ್ಯದಲ್ಲಿ ರಾಜಕೀಯ ಕಾಣುವುದು ಸರಳೀಕೃತ ಗ್ರಹಿಕೆ. ಕೇವಲ ಪ್ರತಿರೋಧ ಮಾತ್ರ ಇರೋದು, ಅದು ಬಂಡಾಯ ಇರಬಹುದು, ಯಾವುದೇ ಇರಬಹುದು, ಅದು ಯಾವತ್ತೂ ಎರಡನೆಯ ದರ್ಜೆಯ ಸಾಹಿತ್ಯವೇ. ಆದರೆ ಯಾವುದು ಅಂತರ್ಗತವಾಗಿರುತ್ತದೋ ಅದು ನಿಜವಾದ ರಾಜಕೀಯ ಸಾಹಿತ್ಯ. ಅದಕ್ಕಾಗಿ ದೇವನೂರ ಮಹಾದೇವ ಉಳಿದವರಿಗಿಂತ ಭಿನ್ನ ಮತ್ತು ಶ್ರೇಷ್ಠ. ಇಂತಹ ಬರವಣಿಗೆ ಆ ಕ್ಷಣಕ್ಕೆ ಪ್ರಚೋದಿಸುವ ರಂಜಿಸುವ ಸಾಹಿತ್ಯವಲ್ಲ. ಆದರೆ ಬದುಕಿನಲ್ಲಿ ನಾವು ನಿರ್ಧಾರ ಕೈಗೊಳ್ಳುವ ಗಳಿಗೆಗಳಿಗೆ ಈ ಸಾಹಿತ್ಯ ನಮ್ಮನ್ನು ತಯಾರುಗೊಳಿಸುತ್ತದೆ. ಸರಳ ಉದಾಹರಣೆಯೆಂದರೆ ಘರ್ಷಣೆಯ ಕಾಲದಲ್ಲಿ ಯಾರ ಪರ ನಿಲ್ಲಬೇಕೆಂಬುದನ್ನು ಅದು ಕಲಿಸುತ್ತದೆ. ಬೀದಿಗಿಳಿದು ಪ್ರತಿಭಟಿಸುವ ನೈತಿಕ ನೆಲೆಯನ್ನು ಅದು ಸಜ್ಜುಗೊಳಿಸುತ್ತದೆ. ರಾಜಕೀಯವಿಲ್ಲದೆ ಸಾಹಿತ್ಯವಿಲ್ಲ, ಬದುಕಿಲ್ಲ. ಸಾಹಿತ್ಯದಲ್ಲಿ ರಾಜಕೀಯ ಬೇಕೋ ಬೇಡವೋ ಎನ್ನುವ ಪ್ರಶ್ನೆಯೇ ನನಗೆ ಬರುವುದಿಲ್ಲ. ಅದನ್ನು ಪ್ರತ್ಯೇಕಿಸಲು ಬರುವುದಿಲ್ಲ. ನನಗೆ ನನ್ನದೇ ಆದ ಸ್ಪಷ್ಟ ರಾಜಕೀಯ ನಿಲುವುಗಳಿವೆ. ಹಾಗೆಂದು ನಾನದನ್ನು ಕರಪತ್ರದಲ್ಲಿ ಬರೆಯುವ ಹಾಗೆ ಸಾಹಿತ್ಯದಲ್ಲಿ ತರುವುದಿಲ್ಲ.

● ಯಾಕೆಂದರೆ ಅದು ಸರಿಯಾದ ಕ್ರಮ ಅಲ್ಲ?'

ಅದು ಪರಿಣಾಮಕಾರಿಯೂ ಅಲ್ಲ. ಪರ್ಸನಲ್ ಈಸ್ ಪೊಲಿಟಿಕಲ್ ಅನ್ನುವ ಫೆಮಿನಿಸ್ಟ್ ಚಳವಳಿಯ ಮಾತನ್ನು ಇಲ್ಲಿ ನೆನೆಯುವುದು ಸೂಕ್ತ. ಇದರ ಇನ್ನೊಂದು ಮಗ್ಗಲಾಗಿ ಒಂದು ಹಿಂಸಾಚಾರ ನಡೆದಾಗ ಸಾಮೂಹಿಕ ಪಾಪವನ್ನು ವೈಯಕ್ತಿಕಗೊಳಿಸಿ ಸ್ವತಃ ನೋಯುವ ಗಾಂಧಿಯನ್ನೂ ನೆನೆಯುತ್ತೇನೆ. ಒಳ್ಳೆಯ ಸಾಹಿತ್ಯ ಇದೆರಡನ್ನೂ ಒಟ್ಟಿಗೇ ಹಿಡಿಯುವ ಪ್ರಯತ್ನದ ಫಲ.

● ಇದಕ್ಕೆ ಸಂಬಂಧಿಸಿದ ಇನ್ನೊಂದು ಪ್ರಶ್ನೆ. ನೀವು ಬಹಳ ಸಂಕೋಚ ಸ್ವಭಾವದವರು. ಅನಗತ್ಯವಾಗಿ ಮಾತಾಡುವವರಲ್ಲ. ಯು ನೋ ವೆನ್ ಟು ಸ್ಪೀಕ್, ವಾಟ್ ಟು ಸ್ಪೀಕ್, ಅಂಡ್ ವೇರ್ ಟು ಸ್ಪೀಕ್. ನಿಮ್ಮ ಈ ಮೌನವನ್ನ ನಿಮ್ಮ ಓದುಗರು ಯಾವ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು? ಒಂದು ರೀತಿಯಲ್ಲಿ ಈಗಾಗಲೇ ಇದಕ್ಕೆ ಉತ್ತರಿಸಿದ್ದೀರ. ಪರಿಣಾಮಕಾರಿಯಾದ ಬರವಣಿಗೆ ನಿಮ್ಮ ಆದ್ಯತೆ. ಹಾಗಾಗಿ ಹಸಿಹಸಿಯಾದ ಇಂಪಲ್ಸಿವ್ ಆದ ಪ್ರತಿಕ್ರಿಯೆಗಳು, ಅಭಿಪ್ರಾಯಗಳು, ಹೇಳಿಕೆಗಳು ನಿಮ್ಮಿಂದ ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲವೇನೋ?

ಅಭಿಪ್ರಾಯ, ಪ್ರತಿಕ್ರಿಯೆಗಳಿಗಾಗಿ ಈಗ ನಮ್ಮ ಮೇಲೆ ಬಹಳ ಒತ್ತಡವಿದೆ. ಸೋಶಿಯಲ್ ಮೀಡಿಯಾದಲ್ಲಂತೂ ಕ್ಷಣಕ್ಷಣಕ್ಕೂ ಅಭಿಪ್ರಾಯವನ್ನು ಬಯಸಲಾಗುತ್ತದೆ. ಕೇವಲ ಬರಹಗಾರರ ಮೇಲಲ್ಲ, ಎಲ್ಲರ ಮೇಲೂ ಇದೆ. ಬರಹಗಾರರ ಮೇಲೆ ಹೆಚ್ಚಿದೆ. ಸೋಶಿಯಲ್ ಮೀಡಿಯಾದಲ್ಲಿ